# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

*2018 ಏಪ್ರಿಲ್ 7,*

ನಂ. 25650/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *1193 ಮೀನ 24/*

*1940 ಚೈತ್ರ 17.*

2018 ಏಪ್ರಿಲ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 27ನೇ ನಂಬ್ರ ಅಧ್ಯಾದೇಶ

## 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದು.

1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 40)ವನ್ನು 2017 ಡಿಸಂಬರ್ 26ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿರುವುದರಿಂದಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 97ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸುವುದಕ್ಕಾಗಿ 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 16)ವನ್ನು 2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಫೆಬ್ರವರಿ 26ನೇ ದಿನಾಂಕದಂದು ಆರಂಭವಾಗಿ 2018 ಏಪ್ರಿಲ್ 4ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 115ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪ-ಖಂಡದ ಪ್ರಕಾರ, 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 16)ವು 2018 ಏಪ್ರಿಲ್ 9ನೇ ದಿನಾಂಕದಂದು ಜಾರಿಯಲ್ಲಿಲ್ಲದಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲು ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. <u>ಸಣ್ಣ ಹೆಸರು ಮತ್ತು ಪ್ರಾರಂಭ.</u>—(1) ಈ ಅಧ್ಯಾದೇಶವನ್ನು 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 26ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. <u>ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 1974ರ 17ನೇ ಅಧಿನಿಯಮ.</u>—ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 1974ರ ಕೇರಳ ವಿಶ್ವವಿದ್ಯಾಲಯ ಅಧಿನಿಯುಮ (1974ರ 17) (ಇನ್ನು ಮುಂದೆ ಪ್ರಧಾನ ಅಧಿನಿಯುಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3 ಮತ್ತು 4ನೇ ವಿಭಾಗಗಳ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪ್ರಾಬಲ್ಯವಿರುವುದಾಗಿದೆ.

3. <u>17ನೇ ವಿಭಾಗದ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ 17ನೇ ವಿಭಾಗದಲ್ಲಿ,—

(ಎ) "ಚುನಾಯಿತ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ,—

(i) ಐಟಂ (1)ರ ಬದಲು ಈ ಕೆಳಗಿನ ಐಟಂನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಸರಕಾರಿ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಮೂವರು ಪ್ರಿನ್ಸಿಪಲ್‌ರವರು, ಅನುದಾನ ರಹಿತ ಕಾಲೇಜುಗಳ ಹೊರತು ಖಾಸಗಿ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಮೂವರು ಪ್ರಿನ್ಸಿಪಲ್‌ರವರು ಮತ್ತು ಅನುದಾನರಹಿತ ಕಾಲೇಜುಗಳ ಪ್ರಿನ್ಸಿಪಾಲರುಗಳು ತಮ್ಮೊಳಗಿನಿಂದ ಚುನಾಯಿಸಲ್ಪಟ್ಟ ಒಬ್ಬ ಪ್ರಿನ್ಸಿಪಲ್.";

(ii) ಐಟಂ (11)ರಲ್ಲಿ, "ನಾಲ್ಕು ಸದಸ್ಯರು" ಎಂಬ ಪದಗಳ ಬದಲು, "ಒಬ್ಬ ಸದಸ್ಯ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ, ಐಟಂ (4)ರ ನಂತರ, ಈ ಕೆಳಗಿನ ಐಟಂನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5) ಮಾಹಿತಿ ತಂತ್ರಜ್ಞಾನ ಕ್ಷೇತ್ರದಿಂದ ಸರಕಾರಿ ನಾಮನಿರ್ದೇಶಿತ ಒಬ್ಬ ಸದಸ್ಯ.".

4. 21ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 21ನೇ ವಿಭಾಗದಲ್ಲಿ, "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ,—

(ಎ) ಐಟಂ (ಎ)ಯಲ್ಲಿ,—

(i) "ಹದಿಮೂರು" ಎಂಬ ಪದದ ಬದಲು, "ಹನ್ನೆರಡು" ಎಂಬ ಪದವನ್ನು ಸೇರಿಸತಕ್ಕದ್ದು;

(ii) ಉಪ-ವಿಭಾಗ (iii)ರಲ್ಲಿ, "ಏಳು" ಎಂಬ ಪದದ ಬದಲು, "ಆರು" ಎಂಬ ಪದವನ್ನು ಸೇರಿಸತಕ್ಕದ್ದು;

(iii) ಉಪ-ವಿಭಾಗ (ii)ರಲ್ಲಿ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

(ii) ಕಾಲೇಜುಗಳ ಇಬ್ಬರು ಪ್ರಿನ್ಸಿಪಲ್‌ರವರು, ಅವರಲ್ಲಿ ಒಬ್ಬರು ಸರಕಾರಿ ಕಾಲೇಜಿನಿಂದಲೂ ಮತ್ತೊಬ್ಬರು ಅನುದಾನ ರಹಿತ ಕಾಲೇಜಿನ ಹೊರತಾದ ಖಾಸಗಿ ಕಾಲೇಜಿನಿಂದಲೂ ಆಗಿರತಕ್ಕದ್ದು.";

(ಬಿ) ಐಟಂ (ಡಿ)ಯ ನಂತರ, ಈ ಕೆಳಗಿನ ಐಟಂನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಇ) ವಿಭಾಗ 17ರಲ್ಲಿ "ಇತರ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ ಐಟಂ (5)ರಲ್ಲಿ ಉಲ್ಲೇಖಿಸಲಾದ ಸದಸ್ಯ.".

5. ರದ್ಧತಿ ಮತ್ತು ರಕ್ಷಣೆ.—(1) 2018ರ ಕೇರಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2018ರ 16)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.